**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,**

**ರಾಣೇಬೆನ್ನೂರು.**

**ಸಿ.ಸಿ. ನಂ. 662/2019.**

**ಸಿ ಡಬ್ಲ್ಯೂಃ 31**

**ಪಿ ಡಬ್ಲ್ಯೂಃ 12**

| | | |
|---|---|---|
| ಹೆಸರು | : | ಸುನೀಲ್ ಕುಮಾರ ಹೆಚ್ |
| ತಂದೆಯ ಹೆಸರು | : | ಮಂಜುನಾಥ್ ಹೆಚ್ ಬಿ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ಪೋಲೀಸ್ ಇನಸ್ಪೇಕ್ಟರ್ ಹೊನ್ನಾಳಿ ಪಿಎಸ್ |
| ವಾಸಸ್ಥಳ | : | ಹೊನ್ನಾಳಿ |

**ದಿನಾಂಕಃ 06-06-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ**

ದಿಃ 04.08.2018 ರಿಂದ 14.08.2019 ರವರಿಗೆ ರಾಣೇಬೆನ್ನೂರು ಗ್ರಾಮಾಂತರ ಪೋಲೀಸ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ದಿಃ 05.11.2018 ರಂದು ಚಾಸಾ-30 ರವರಿಂದ ಈ ಪ್ರಕರಣವನ್ನು ಪಡೆದುಕೊಂಡಿರುತ್ತೇನೆ. ರಾಣೇಬೆನ್ನೂರು ಶಹರದ ಪೋಲೀಸ ಠಾಣೆಯ ಅಪರಾಧ ಸಂಖ್ಯೆಃ 124/2015 ಪ್ರಕರಣದ ಆರೋಪಿತರು ನಮ್ಮ ಗ್ರಾಮಾಂತರ ಪೋಲೀಸ ಠಾಣೆಯ ಕ್ರೈಂ ನಂ 260/2018 ನೇದ್ದರಲ್ಲಿಯ ಕಳ್ಳತನ ಮಾಡಿದ ಖಾಲಿ ಸಿಲೆಂಡರಗಳನ್ನು ಕಳ್ಳತನ ಮಾಡಿದ ಬಗ್ಗೆ ಒಪ್ಪಿಕೊಂಡಿರುತ್ತಾರೆ ಎಂದು ಇ-ಮೇಲ್ ಬಂದಿದ್ದು, ಅದನ್ನು ಸ್ವೀಕರಿಸಿಕೊಂಡಿರುತ್ತೇನೆ. ದಿಃ 10.11.2018 ರಂದು ಠಾಣಾ ಸಿಎಚ್‌ಸಿ 587 ಅರಳಿಮರದ ಮುಖಾಂತರ ರಾಣೇಬೆನ್ನೂರು ಶಹರದ ಕ್ರೈಂ ನಂಬರ 124/2018 ಕಾಗದ ಪತ್ರಗಳನ್ನು ಹಾಗೂ ಕಡತಗಳನ್ನು ಹಾಗೂ ಪಿಎಫ್ ನಂಬರ

84/2018 ಮತ್ತು 85/2018 ರ ಪಿಎಫ್‌ಗಳನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿನಾಂಕಃ 12.12.2018 ರಂದು ಈ ಪ್ರಕರಣದ ಸಾಕ್ಷಿದಾರರಾದಂತಹ ಚಾಸಾ-1,4,6,7,8,9,10,11 ಮತ್ತು ಚಾಸಾ-13 ರವರ ಮರು ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕಃ 12.04.2019 ರಂದು ಪಿಎಫ್ ನಂಬರ 134/2018 ರ 03 ಖಾಲಿ ಸಿಲೆಂಡರಗಳನ್ನು ನ್ಯಾಯಾಲಯ ಆದೇಶದ ಮೇರೆಗೆ ಅದರ ಮಾಲಿಕರಿಗೆ ಬಿಡುಗಡೆ ಮಾಡಿರುತ್ತೇನೆ. ಆ ಕಾಲಕ್ಕೆ ಫೋಟೋಗಳನ್ನು ತೆಗೆದಿರುತ್ತೇನೆ. ಅವುಗಳನ್ನು ಈಗಾಗಲೇ ನಿಪಿ-6 ಮತ್ತು 7 ಎಂದು ಗುರುತಿಸಲಾಗಿದೆ. ತನಿಖೆಯ್ನು ಪೂರೈಸಿ ಅದೇ ದಿನ ಪ್ರಕರಣವನ್ನು ನ್ಯಾಯಾಲಯಕ್ಕೆ ದೋಷಾರೋಪಣೆಯ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**<u>ಪಾಟೀ ಸವಾಲುಃ</u>**

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೆ.ಸರಿ ಇದೆ.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ.ರಾಣೇಬೆನ್ನೂರು.